ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರ (ಐ.ಸಿ.ಎ.ಆರ್),
ಚೆಟ್ಟಳ್ಳಿ –571 248, ಕೊಡಗುಜಿಲ್ಲೆ
Phone: 7892882351
Email-Chesc.iihr@icar.gov.in

F.No.12-14/SP/Crop auction/2021-22/ Dt: 22.10.2021

# ಟೆಂಡರ್/ಹರಾಜು ಪ್ರಕಟಣೆ

ಈ ಮೇಲ್ಕಂಡ ಪ್ರಾಯೋಗಿಕ ಕೇಂದ್ರದಲ್ಲಿ ಬೆಳೆಸಿರುವ ಕೆಳಗೆ ನಮೂದಿಸಿರುವ ಬೆಳೆಯ ಫಸಲಿನ ಪ್ರತ್ಯೇಕ ಮಾರಾಟಕ್ಕಾಗಿ, ಸಂಸ್ಥೆಯ ಪರಿಷ್ಕೃತ ನಿಯಮಾವಳಿಗಳ ಪ್ರಕಾರ, ಮೊಹರಾದ ಟೆಂಡರ್/ sealed tender ನ್ನು ಕರೆಯಲಾಗಿದೆ.

| ಫಸಲು | ಗಿಡಗಳು | ಇ.ಎಮ್.ಡಿ. (ಖಾತೆಗೆಜಮಾ ಮಾಡುವಡಿಮಾಂಡ್ ಡ್ರಾಫ್ಟ್ ಮೂಲಕ (ರೂ.ಗಳಲ್ಲಿ) | ಟೆಂಡರ್ಅರ್ಜಿ ಫಾರಂ ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | ಟೆಂಡರ್ /ಹರಾಜು ನಡೆಸುವ ದಿನಾಂಕ ಮತ್ತು ಸಮಯ |
|---|---|---|---|---|---|
| ಸಪೋಟ (Sapota) | 550 | 25,000 | 09.11.2021 4.00 PM | 10.11.2021 12.00 PM | 10.11.2021 2.00 PM |
| ರೋಬಸ್ಟಾ ಕಾಫಿ (Robusta Coffee) | 1945 | 20,000 | 09.11.2021 4.00 PM | 10.11.2021 12.00 PM | 10.11.2021 2.00 PM |
| ಲಿಚ್ಚಿ (Litchi) | 30 | 10,000 | 09.11.2021 4.00 PM | 10.11.2021 12.00 PM | 10.11.2021 2.00 PM |
| ದಾಲ್ಚಿನಿ (Cinnamon plants) | 200 | 10,000 | 09.11.2021 4.00 PM | 10.11.2021 12.00 PM | 10.11.2021 2.00 PM |

ಟೆಂಡರ್ ಫಾರಂ ಹಾಗೂ ನಿಯಮ ನಿಭಂದನೆಗಳನ್ನು, ಈ ಕಛೇರಿಯ ಕೆಲಸದ ವೇಳೆ, ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯ ಒಳಗೆ ಖುದ್ದಾಗಿ ಅರ್ಜಿ ಪಡೆಯುವವರು ಪ್ರತ್ಯೇಕ ಅರ್ಜಿಗಳನ್ನು ರೂ.200/- ಪಾವತಿಸಿ ಪಡೆಯಬಹುದು. ಅರ್ಜಿ ಫಾರಂ ಹಣವನ್ನು ಮರುಪಾವತಿಸಲಾಗುವುದಿಲ್ಲ. ಟೆಂಡರ್/ಹರಾಜು ನಲ್ಲಿ ಭಾಗವಹಿಸುವವರು. ಇ.ಎಮ್.ಡಿ. ಹಣವನ್ನು ಕಡ್ಡಾಯವಾಗಿ, ಖಾತೆಗೆ ಜಮಾ ಮಾಡುವ (Account payee)ಡಿಮಾಂಡ್‌ಡ್ರಾಫ್ಟ್ (ಡಿ.ಡಿ) ಅನ್ನು, ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಮಡಿಕೇರಿಯ SBI ಯಲ್ಲಿ ಪಾವತಿಯಾಗುವಂತೆ "The Head, CHES, Chettalli",ಇವರ ಹೆಸರಿನಲ್ಲಿ, ಪಾವತಿ ಮಾಡತಕ್ಕದ್ದು; ಈ ಸಂಬಂಧದ ಹಣವನ್ನು, ನಗದಿನ ಮೂಲಕ ಸ್ವೀಕರಿಸಲಾಗುವುದಿಲ್ಲ. ಯಶಸ್ವಿ ಸವಾಲುಗಾರ, ಟೆಂಡರ್ ಹಣದ ಶೇಕಡ 25 ರಷ್ಟನ್ನು 10.11.2021ರ ಅಪರಾಹ್ನ 4.00 PM ಒಳಗೆ ಡಿ.ಡಿ/NEFT ಮೂಲಕ ಪಾವತಿಸತಕ್ಕದ್ದು. ಉಳಿದ ಮೊತ್ತವನ್ನು, ಫಸಲು ಕೊಯ್ಯುವ ಮೊದಲು ಡಿ.ಡಿ/NEFT ಮೂಲಕ ಪಾವತಿಸಬೇಕು. ಯಾವುದೇ ಕಾರಣಕೊಡದೇ ಟೆಂಡರ್/ಹರಾಜು ಅಥವಾ ನಮೂದಿಸಿದ ಮೊಬಲಗನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಟೆಂಡರ್/ಹರಾಜು ನಡೆಸುವ ಸಮಿತಿಯು ಹೊಂದಿರುತ್ತದೆ.

ಆಸಕ್ತಿ ಉಳ್ಳವರು ದಿನಾಂಕ 10.11.2021 ರಂದು ಅಪರಾಹ್ನ 12.00 ಗಂಟೆಯ ಒಳಗೆ ನಮೂದಿತಅರ್ಜಿ ಫಾರಂಗಳನ್ನು ಭರ್ತಿ ಮಾಡಿ ಡಿಮಾಂಡ್‌ಡ್ರಾಫ್ಟ್ ಜೊತೆಗೆ ಈ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಅದೇ ದಿನ ತಾರೀಖು10.11.2021 ರಂದು ಅಪರಾಹ್ನ 2.00 ಗಂಟೆಗೆ ಟೆಂಡರ್ ಅರ್ಜಿಗಳ ಲಕೋಟೆಗಳನ್ನು ಅರ್ಜಿದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

ವಿ.ಸೂ: ಯಶಸ್ವಿಯಲ್ಲದ ಸವಾಲುಗಾರರ ಇ.ಎಮ್.ಡಿ.ಯ ಡಿಮಾಂಡ್‌ಡ್ರಾಫ್ಟ್‌ನ್ನು ಅದೇದಿನ ಹಿಂತಿರುಗಿಸಲಾಗುವುದು.

ಮುಖ್ಯಸ್ಥರು